ದಿನಾಂಕಃ 27.06.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)
ಪ್ರಾ.ಸಾಃ 1

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎಸ್., ವಕೀಲರಿಂದಃ

2. ದಾವೆಯನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಪ್ರತಿವಾದಿಗಳು ಏನು ತಕರಾರು ಹಾಕಿದ್ದಾರೆಂದು ಎಂದು ತಿಳಿದುಕೊಂಡಿದ್ದೀರಾ ಅಂದರೆ ನಾನು ತಿಳಿದುಕೊಂಡಿಲ್ಲ.

3. ದೊಡ್ಡಲಿಂಗೇಗೌಡ ಮತ್ತು ಚೆನ್ನಮ್ಮರವರಿಗೆ ಒಟ್ಟು ಐದು ಜನ ಮಕ್ಕಳು ಅಂದರೆ ಸರಿ. ಐದು ಜನ ಮಕ್ಕಳಲ್ಲಿ ತೋಟದಲಿಂಗೇಗೌಡ, ಹೊನ್ನಮ್ಮ, ಲಿಂಗಪ್ಪ, ರಾಜಣ್ಣ, ಚೆನ್ನಮ್ಮ, ಶಿವಲಿಂಗಯ್ಯ ಅಂದರೆ ಸರಿ.

4. 1 ನೇ ಪ್ರತಿವಾದಿ - ಸುಶೀಲಮ್ಮ ಎಂ.ಎನ್.ರಾಜಣ್ಣರವರಿಗೆ 2 ನೇ ಹೆಂಡತಿ ಅಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಕ್ಕಳು ಅಂದರೆ ಸರಿ.

5. ಎಂ.ಎನ್.ರಾಜಣ್ಣರವರಿಗೆ ಯಶೋದಮ್ಮ ಮೊದಲನೇ ಪತ್ನಿ ಅಂದರೆ ಸರಿ. ಸದರಿ ಅವರಿಗೆ ಮಂಜಪ್ಪ ಮತ್ತು ಮೋಹನ ಹಾಗೂ ಸೌಮ್ಯ ಎನ್ನುವ ಮೂರು ಜನ ಮಕ್ಕಳು ಅಂದರೆ ಸರಿ. ದಾವಾ ಹೂಡುವಾಗ ನಾನು ಸದರಿ ಮಂಜಪ್ಪ, ಮೋಹನ ಹಾಗೂ ಸೌಮ್ಯರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ.

6. ಕಾಡಸಿದ್ದೇಗೌಡ ನನ್ನ ತಾತ. ಕಾಡಸಿದ್ದೇಗೌಡರವರು ದೊಡ್ಡಲಿಂಗೇಗೌಡರವರ ಹೆಂಡತಿ - ಚೆನ್ನಮ್ಮರವರ ಅಣ್ಣ ಅಂದರೆ ಸರ. ಕಾಡಸಿದ್ದೇಗೌಡರವರು ಚನ್ನಪಟ್ಟಣ ತಾಲ್ಲೂಕು, ಹುಲುವಾಡಿ ಗ್ರಾಮದವರು ಅಂದರೆ ಸರಿ. ಕಾಡಸಿದ್ದೇಗೌಡರವರಿಗೆ ಹುಲುವಾಡಿ ಗ್ರಾಮದಲ್ಲಿ ಹಲವಾರು ಆಸ್ತಿ ಇತ್ತು ಅಂದರೆ ಸರಿ. ಕಾಡಸಿದ್ದೇಗೌಡರವರಿಗೆ ಗಂಡು ಸಂತಾನ ಇರಲಿಲ್ಲ ಅಂದರೆ ಸರಿ.

7. ನನ್ನ ತಂದೆ - ಎಂ.ಎನ್.ನಿಂಗಪ್ಪರವರು ಕಾಡಸಿದ್ದೇಗೌಡರವರ ಹುಲುವಾಡಿಯ ಮನೆಯಲ್ಲಿ ಇದ್ದರು ಅಂದರೆ ಸರಿಯಲ್ಲ. ನನ್ನ ತಂದೆಯ ಜೀವತಾಧಿಯಲ್ಲಿ ಮತ ಚಲಾವಣೆಯನ್ನು ಹುಲುವಾಡಿಯಲ್ಲಿ ಚಲಾಯಿಸುತ್ತಿದ್ದರು. ನನ್ನ ತಂದೆ ಮರಣ ಹೊಂದುವವರೆಗೂ ಹುಲುವಾಡಿಯಲ್ಲಿಯೇ ಮತ ಚಲಾಯಿಸುತ್ತಿದ್ದರು ಅಂದರೆ ಸರಿ. ಅದೇ ರೀತಿ ನನ್ನ ತಾಯಿಯು ಸಹ ಹುಲುವಾಡಿಯಲ್ಲಿ ಮತ ಚಲಾಯಿಸುತ್ತಿದ್ದರು ಅಂದರೆ ಸರಿ. ನನ್ನ ತಂದೆ - ತಾಯಿಯವರ ಆಧಾರ ಕಾರ್ಡ್ ಹುಲುವಾಡಿ ಗ್ರಾಮದ ವಿಳಾಸ ನಮೂದು ಇದೆ ಅಂದರೆ ಸರಿ.

8. ಕಾಡಸಿದ್ದೇಗೌಡರವರ ಎಲ್ಲಾ ಆಸ್ತಿಗಳು ನನ್ನ ತಾಯಿಯ ಸ್ವಾಧೀನದಲ್ಲಿದೆ ಅಂದರೆ ಸಾಕ್ಷಿ ಕಾಡಸಿದ್ದೇಗೌಡರವರಿಗೆ ಇಬ್ಬರು ಹೆಣ್ಣು ಮಕ್ಕಳು, ಇಬ್ಬರ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿ ನನ್ನ ತಾಯಿಯ ಹೆಸರಿಗೆ ಖಾತೆ ಆಗುತ್ತದೆ ಅಂದರೆ ಸರಿ.

9. ತಾಃ 10.01.1976 ರಂದು ದೊಡ್ಡಲಿಂಗೇಗೌಡ ಮತ್ತು ಅವರ 4 ಜನ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆಂದು ಯಾವ ದಾಖಲೆ ಹಾಜರುಪಡಿಸಿದ್ದೀರಾ ಅಂದರೆ ಸಾಕ್ಷಿ ಪಂಚಾಯತ್ ಪಾರಿಕತ್, ಪಾಸ್‌ಬುಕ್ ಮತ್ತು ಖಾತಾ ಹಾಜರುಪಡಿಸಿರುತ್ತೇನೆ. ಪಂಚಾಯತ್ ಪಾರಿಕತ್‌ನ್ನು ನಾನು ಓದಿಸಿ ತಿಳಿದುಕೊಂಡಿದ್ದೇನೆ.

10. ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ಪಂಚಾಯತ್ ಪಾರಿಕತ್‌ನಂತೆ ನನ್ನ ತಂದೆಯ ಭಾಗಕ್ಕೆ ಸರ್ವೆ ನಂ.516 ರಲ್ಲಿ 23 ವರೆ ಗುಂಟೆ ಬಂದಿದೆ, ಉಳಿದಂತೆ ನನಗೆ ಗೊತ್ತಿಲ್ಲ.

11. ಸದರಿ ಪಂಚಾಯತ್ ಪಾರಿಕತ್‌ರಂತೆ ನಿಮ್ಮ ತಂದೆಯ ಜೊತೆಗೆ ಬೇರೆ ಯಾರಿಗೆ ಎಷ್ಟೆಷ್ಟು ವಿಭಾಗವಾಗಿದೆ ಎಂದು ತಿಳಿದುಕೊಂಡಿದ್ದೀರಾ ಅಂದರೆ ಇಲ್ಲ. ಪಂಚಾಯತ್ ಪಾರಿಕತ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ

ಸಂದರ್ಭದಲ್ಲಿ ನನ್ನ ವಶದಲ್ಲಿತ್ತು, ಸದರಿ ದಾಖಲೆಯನ್ನು ನನ್ನ ತಂದೆ ಮನೆಯಲ್ಲಿಟ್ಟಿದ್ದರು.

12. ಈ ಹಂತದಲ್ಲಿ ಸಾಕ್ಷಿಗೆ ಗುರುತಿಸಿರುವ ನಿಶಾನೆಗಳನ್ನು ತೋರಿಸಿ, ಅದರಲ್ಲಿ ತಾಃ 10.01.1976 ರ ಪಂಚಾಯತ್ ಪಾರಿಕತ್‌ನ್ನು ತೋರಿಸಿ ಎಂದು ಕೇಳಲಾಗಿ, ಸಾಕ್ಷಿ ಸದರಿ ದಾಖಲೆ ಈ ನಿಶಾನೆಗಳಲ್ಲಿ ಇಲ್ಲ, ಆದರೆ ನಾನು ಹಾಜರುಪಡಿಸಿದ್ದೆನು ಎಂದು ನುಡಿಯುತ್ತಾರೆ.

13. ತಾಃ 10.01.1976 ರ ಮೂಲ ಪಂಚಾಯತ್ ಪಾರಿಕತ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೇಯಾ ಅಂದರೆ ಇಲ್ಲ. ಈ ಹಂತದಲ್ಲಿ ಸಾಕ್ಷಿಗೆ ಸರ್ವೆ ನಂ.516 ರ ಪಟ್ಟಾ ಬುಕ್ ನೀಡಿದ್ದು, ಅದನ್ನು ಸಾಕ್ಷಿ ನೋಡಿ ಅದು ಪಟ್ಟಾ ಬುಕ್ ಎಂದು ಗುರುತಿಸಿದ್ದು, ಮುಂದುವರೆದು ಸಾಕ್ಷಿ ಅದನ್ನು ಇತ್ತೀಚೆಗೆ ಮಾಡಿಸಿಕೊಂಡಿರುವುದು ಎಂದು ನುಡಿದಿದರುತ್ತಾರೆ. ಸದರಿ ದಾಖಲೆಯನ್ನು ಈಗ ನಿಡಿ.1 ಎಂದು ಗುರುತಿಸಲಾಯಿತು.

14. ಈ ಹಂತದಲ್ಲಿ ಸಾಕ್ಷಿಗೆ 2 ದಾಖಲಾತಿಗಳನ್ನು ತೋರಿಸಿದ್ದು, ಅವುಗಳು ದಾವಾ ಷಡ್ಯೂಲ್ ಸರ್ವೆ ನಂ.516 ರ ಪಹಣಿ ಮತ್ತು ಮ್ಯುಟೇಷನ್ ಆಗಿದ್ದು, ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ಈಗ ಕ್ರಮವಾಗಿ ನಿಡಿ2 ಮತ್ತು 3 ಎಂದು ಗುರುತಿಸಲಾಯಿತು.

15. ನಾನು ನನ್ನ ತಂದೆಯ ಸಹಿಯನ್ನು ನೋಡಿ ಗುರುತಿಸುತ್ತೇನೆ ಅಂದರೆ ಸರಿ. ದಾವಾ ಷಡ್ಯೂಲ್ ಸರ್ವೆ ನಂ.516 ರಲ್ಲಿ ಎಂ.ಎನ್.ರಾಜಣ್ಣ ಮರಣ ಹೊಂದಿದ ನಂತರ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆ ಅಂದರೆ ಸರಿ. ದಾವಾ ಷಡ್ಯೂಲ್ ಸರ್ವೆ ನಂ.516 ರಲ್ಲಿ ಪ್ರತಿವಾದಿಗಳಿಂದ ಸ್ವಾಧೀನಾನುಭವ ಕೊಡಿಸಿ ಎಂದು ನ್ಯಾಯಾಲಯದಲ್ಲಿ ಪರಿಹಾರ ಕೇಳಿದ್ದೀರಾ ಅಂದರೆ ಕೇಳಿದ್ದೇನೆ.

16. ನನ್ನ ತಂದೆ ಮರಣ ಹೊಂದಿದ ನಂತರ ಸರ್ವೆ ನಂ.145/7 ರಲ್ಲಿ 11 ಗುಂಟೆ, 67/5 ರಲ್ಲಿ 8 ಗುಂಟೆ, 67/3 ರಲ್ಲಿ 12 ಗುಂಟೆ, 996 ರಲ್ಲಿ ಒಂದುಕಾಲು ಗುಂಟೆ ಸೈಟ್ ನಂ.17 ಮತ್ತು 14 ನನ್ನ ತಾಯಿಯ ಹೆಸರಿಗೆ ವರ್ಗಾವಣೆ ಆಯಿತು ಅಂದರೆ ಸರಿ. ಸದರಿ ಎಲ್ಲಾ ಆಸ್ತಿಗಳು ಹುಲುವಾಡಿ ಗ್ರಾಮಗಳದ್ದು

ಅಂದರೆ ಸರಿ. ಸದರಿ ಎಲ್ಲಾ ಸ್ವತ್ತುಗಳು ಮೂಲತಃ ಕಾಡಸಿದ್ದೇಗೌಡರವರಿಗೆ ಸೇರಿದ್ದು ಅಂದರೆ ಸರಿ.

17. ತಾಃ 03.09.2018 ರಲ್ಲಿ ರಘು ಎನ್ನುವವರಿಗೆ ನನ್ನ ತಾಯಿ ಸೇರಿದಂತೆ ನಾವು ವಾದಿಗಳೆಲ್ಲರೂ ನಿವೇಶನ ಸಂಖ್ಯೆ 17 ಮತ್ತು 14 ನ್ನು ಮಾರಾಟ ಮಾಡಿದ್ದೇವೆ ಅಂದರೆ ಸರಿ. ಸದರಿ ಕ್ರಯಪತ್ರವನ್ನು ಈಗ ನಿಡಿ4 ಎಂದು ಗುರುತಿಸಲಾಯಿತು.

18. ತಾಃ 19.05.2017 ರಂದು ನನ್ನ ತಂದೆ ನೋಂದಾಯಿತ ವಿಲ್‌ಯ ಮರಣಶಾಸನ ಮೂಲಕ ಮೇಲೆ ಹೇಳಿದ ಎಲ್ಲಾ ಸ್ವತ್ತುಗಳನ್ನು ನನ್ನ ತಾಯಿ ಒಳಗೊಂಡಂತೆ ನಮ್ಮ ಹೆಸರಿಗೆ ಮಾಡಿದ್ದರು ಅಂದರೆ ಸರಿ. ಸದರಿ ವಿಲ್‌ನ್ನು ಈಗ ನಿಡಿ.5 ಎಂದು ಗುರುತಿಸಲಾಯಿತು.

19. ಸದರಿ ನಿಡಿ.4 ಮತ್ತು 5 ವಿಚಾರಗಳನ್ನು ನನ್ನ ದಾವೆಯಲ್ಲಿ ನಮೂದು ಮಾಡಿಲ್ಲ ಅಂದರೆ ಸರಿ. ದಾವಾ ಷಡ್ಯೂಲ್ ಸ್ವತ್ತನ್ನು ನನ್ನ ತಂದೆಗೆ ಹೇಗೆ ಬಂತು ಎಂದು ತೋರಿಸಲು ಪಂಚಾಯತ್ ಪಾರಿಕತ್ ತಾಃ 10.01.1976 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇಲ್ಲ ಅಂದರೆ ಸಾಕ್ಷಿ 1999-2000 ರ ಪಹಣಿ ಪತ್ರಿಕೆಗಳು ಇವೆ, ಬೇರೆ ಯಾವುದೇ ದಾಖಲಾತಿ ಇಲ್ಲ ಎಂದು ನುಡಿಯುತ್ತಾರೆ.

20. ತಾಃ 10.01.1976 ರಿಂದ 1999-2000 ರವರೆಗೆ ದಾವಾ ಷಡ್ಯೂಲ್ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿತ್ತು ಎಂದು ಹೇಳಲು ಕಂದಾಯ ದಾಖಲೆಗಳು ಇವೆ. 1976 ರಿಂದ 1999-2000 ರವರೆಗಿನ ಮ್ಯುಟೇಷನ್ ಮತ್ತು ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಚನ್ನಪಟ್ಟಣ.

ದಿನಾಂಕಃ 16.08.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)
ಪ್ರಾ.ಸಾಃ 1

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಎಸ್., ವಕೀಲರಿಂದಃ</u>

21. 1 ನೇ ಪ್ರತಿವಾದಿಯ ಪತಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ, ತಮ್ಮ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದು ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದ್ದೇನೆ ಅಂದರೆ ಸರಿ

22. ಸೃಷ್ಟಿಸಿದ ಯಾವ ದಾಖಲಾತಿಯನ್ನು ನೀವು ನೋಡಿದ್ದೀರಾ ಅಂದರೆ ಸಾಕ್ಷಿ ಪಂಚಾಯತಿ ಪಾರಿಕಾತ್ ಎಂದು ನುಡಿಯುತ್ತಾರೆ. ಸದರಿ ದಾಖಾಲಾತಿಯನ್ನು ನ್ಯಾಯಾಲಯಕ್ಕೆ ನೀಡಿದ್ದೀರಾ ಅಂದರೆ ನೀಡಿದ್ದೇನೆ.

23. ಈ ಹಂತದಲ್ಲಿ ಸಹಿಯನ್ನು ತೋರಿಸಿ, ಸದರಿ ಸಹಿ ತನ್ನ ತಂದೆಯದ್ದಲ್ಲ ಎಂದು ನುಡಿದಿದ್ದು, ಸದರಿ ದಾಖಲೆ ನಿಪಿ.1 - ವಂಶವೃಕ್ಷ ಆಗಿರುತ್ತದೆ. ನಿಪಿ.1 - ವಂಶವೃಕ್ಷದ ಹಿಂಬದಿ ಪುಟದಲ್ಲಿರುವ ಸಹಿ ಯಾರದ್ದು ಅಂದರೆ ಅದು ನನ್ನ ತಂದೆಯದ್ದಲ್ಲ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿರುವ ಎರಡು ಸಹಿಗಳು ನನ್ನ ತಂದೆಯದ್ದಲ್ಲ. ನಿಪಿ.1 ಸೃಷ್ಟಿತ ದಾಖಲಾತಿ.

24. ಎಂ.ಎನ್.ನಿಂಗಪ್ಪರವರು ಹುಲುವಾಡಿಯಲ್ಲಿ ಮಿಲ್ಕ್ ಡೈರಿಯಲ್ಲಿ ಕೆಲಸ ಮಾಡುತ್ತಿದ್ದರು ಅಂದರೆ ಸರಿ. ಸುಮಾರು 30 ವರ್ಷಗಳ ಕಾಲ ಅಂದರೆ ನಿವೃತ್ತಿಯವರೆಗೂ ಹುಲುವಾಡಿ ಮಿಲ್ಕ್ ಡೈರಿಯಲ್ಲಿ ಕೆಲಸ ಮಾಡುತ್ತಿದ್ದರು. ನಾನು, ಸಜಾತಾ, ರಾಧ ಮೂರು ಜನ ಹುಲುವಾಡಿಯ ಶಾಲೆಗೆ ಹೋಗುತ್ತಿದ್ದೆವು ಅಂದರೆ ಸರಿ. ನಮ್ಮ ಮೂರು ಜನ ಹೆಣ್ಣು ಮಕ್ಕಳ ಮದುವೆ ಕೂಡ ಹುಲುವಾಡಿಯಲ್ಲಿಯೇ ಆಗಿದ್ದು ಅಂದರೆ ಸರಿ.

25. ನಮ್ಮ ತಾತ - ಕಾಡಸಿದ್ದಯ್ಯರವರು ನಿರ್ಮಿಸಿದ ಮನೆಯಲ್ಲಿಯೇ ನಾವು ವಾಸವಾಗಿದ್ದೆವು ಅಂದರೆ ಸರಿ. ಸದರಿ ಮನೆಯನ್ನು ನಮ್ಮ ತಂದೆ ಕೆಡವಿ ಅದೇ ಜಾಗದಲ್ಲಿಯೇ ಹೊಸ ಮನೆ ನಿರ್ಮಾಣ ಮಾಡಿದರು ಅಂದರೆ ಸರಿ. ನನ್ನ

ತಂದೆಯ ಮರಣ ವಿಧಿ ವಿಧಾನ ಕಾರ್ಯಗಳೆಲ್ಲವೂ ಸದರಿ ಹುಲುವಾಡಿ ಮನೆಯಲ್ಲಿಯೇ ನೆರವೇರಿಸಿದ್ದು ಅಂದರೆ ಸರಿ.

26. ನಮ್ಮ ಮೂರು ಜನ ಹೆಣ್ಣು ಮಕ್ಕಳು ಎಲ್ಲಾ ದಾಖಲಾತಿಗಳು ಹುಲುವಾಡಿ ವಿಳಾಸದಲ್ಲಿಯೇ ಇದೆ ಅಂದರೆ ಸರಿ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೇನಾದರು ತೊಂದರೆ ಇದೇಯಾ ಅಂದರೆ ಇಲ್ಲ.

27. ನಮ್ಮ ತಾಯಿ - ಚೆನ್ನಮ್ಮ ಅವರ ಮರಣ ನಂತರ ಅವರ ಎಲ್ಲಾ ವಿದಿ ವಿಧನಾ ಕಾರ್ಯಗಳನ್ನು ಎಂ.ಎನ್.ನಿಂಗಪ್ಪರವರೇ ನೆರವೇರಿಸಿದ್ದಾರೆ ಅಂದರೆ ಅವರು ಅವರ ಜೊತೆಯಲ್ಲಿದ್ದ ಕಾರಣ ಅವರು ನೆರವೇರಿಸಿದ್ದಾರೆ ಎಂದು ನುಡಿದಿರುತ್ತಾರೆ.

28. 1 ನೇ ಪ್ರತಿವಾದಿಯ ಪತಿ - ರಾಜಣ್ಣ ದಾವಾ ಷಡ್ಯೂಲ್ ಆಸ್ತಿಗಳಲ್ಲಿ ಅಂಗಡಿ ಮಳಿಗೆಗಳನ್ನು ನಿರ್ಮಿಸಿದ್ದಾರೆ ಅಂದರೆ ಅವರಿಗೆ ಸೇರಿದ 5 ಗುಂಟೆ ಜಮೀನಿನಲ್ಲಿ ನಿರ್ಮಾಣ ಮಾಡಿಕೊಂಡಿದ್ದಾರೆ, ಹಿಂದಕ್ಕೆ ನಮಗೆ ಸೇರಿದ 23 ವರೆ ಗುಂಟೆ ಇದೆ.

29. ಕಾಡಸಿದ್ದೇಗೌಡರವರು ತೀರಿಕೊಂಡ ನಂತರ ಅವರ ಎಲ್ಲಾ ಆಸ್ತಿಗಳನ್ನು ನಮ್ಮ ತಂದೆ ಎಂ.ಎನ್.ನಿಂಗಪ್ಪರವರು ವ್ಯವಸಾಯ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಂ.ಎನ್.ನಿಂಗಪ್ಪರವರ ಹೆಣ್ಣು ಮಕ್ಕಳು ಮಾಡುತ್ತಿದ್ದರು.

30. ಎಂ.ಎನ್.ನಿಂಗಪ್ಪರವರಿಗೆ ಎಂ.ಎನ್.ರಾಜಣ್ಣರವರ ಹೆಸರಿನಲ್ಲಿ ದಾವಾ ಆಸ್ತಿಗಳ ದಾಖಾಲಾತಿಗಳು ಇರುವ ಬಗ್ಗೆ ತಿಳಿದಿತ್ತೇ ಅಂದರೆ ಸಾಕ್ಷಿ ಅವರಿಗೆ ಅನಾರೋಗ್ಯದ ಕಾರಣ ಗೊತ್ತಿರಲಿಲ್ಲ. ದಾವಾ ಷಡ್ಯೂಲ್ ಆಸ್ತಿಗಳು ಎಂ.ಎನ್.ರಾಜಣ್ಣರವರ ಹೆಸರಿನಲ್ಲಿದೆ ಎಂದು ನಮಗೆ ಆರು ವರ್ಷಗಳ ಹಿಂದೆ ತಿಳಿಯಿತು. ಹಾಗಾದರೆ ನಿಮ್ಮ ವಾದಪತ್ರದಲ್ಲಿ ನೀವು ಹೇಳಿರುವಾಗೆ ತಂದೆಯವರು ಎಂ.ಎನ್.ರಾಜಣ್ಣರವರನ್ನು ಕೇಳಿರುವ ವಿಚಾರಗಳು ಸುಳ್ಳು ಅಂದರೆ ಸರಿಯಲ್ಲ.

31. ನಿಪಿ.3 ಪಹಣಿಯನ್ನು 2006 ರಲ್ಲಿ ಪಡೆದುಕೊಂಡಂತಹ ದಾಖಲಾತಿ ಅಂದರೆ ಸರಿ. ನಿಪಿ.3 ನ್ನು ಪಡೆದುಕೊಂಡ ನಂತರ ದಾವಾ ಆಸ್ತಿಯು ಎಂ.ಎನ್.ರಾಜಣ್ಣರವರ ಹೆಸರಿನಲ್ಲಿರುವ ವಿಚಾರ ನನಗೆ ಮತ್ತು ನನ್ನ ಸಹೋದರಿಗೆ ತಿಳಿಯಿತು ಅಂದರೆ ಸರಿ. 2006 ರಿಂದ 2019 ರವರೆಗೆ ನಾನಾಗಲೀ ಅಥವಾ ನನ್ನ ಸಹೋದರಿಯರಾಗಲೀ ಅಥವಾ ನಮ್ಮ ತಂದೆಯಾಗಲೀ ಸದರಿ ಆಸ್ತಿಯ ಬಗ್ಗೆ ಪ್ರಶ್ನೆ ಮಾಡಲು ನಿಮಗೇನಾದರು ತೊಂದರೆ ಇತ್ತಾ ಅಂದರೆ ಇರಲಿಲ್ಲ.

32. ನಿಪಿ4 ರಿಂದ ನಿಪಿ.8 - ದಾಖಲಾತಿಗಳನ್ನು ತಾಲ್ಲೂಕು ಕಚೇರಿಯಿಂದ ದೃಢೀಕೃತ ನಕಲುಗಳನ್ನು ಪಡೆದುಕೊಂಡು ಬಂದು ನ್ಯಾಯಾಲಯಕ್ಕೆ ಹಾಜರುಪಡಿಸಿಸಲು ನಿಮಗೇನಾದರು ತೊಂದರೆ ಇದೇಯಾ ಅಂದರೆ ಇಲ್ಲ. ನಿಪಿ.4 ರಿಂದ ನಿಪಿ.8 ದಾಖಲಾತಿಗಳು ಯಾರ ಬಳಿ ಇದೆ ಅಂದರೆ ನಮ್ಮ ಬಳಿಯೇ ಇದೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೇನು ತೊಂದರೆ ಇಲ್ಲ ಅಂದರೆ ಇಲ್ಲ.

33. 2006 ರಿಂದ ಇಲ್ಲಿಯವರೆಗೆ ರಾಜಣ್ಣರವರ ಹೆಸರಿನಲ್ಲಿ ಆದ್ದಂತಹ ಎಂ.ಆರ್. ಆಗಲೀ ಅಥವಾ 1 ನೇ ಪ್ರತಿವಾದಿ - ಸುಶೀಲಮ್ಮರವರ ಹೆಸರಿನಲ್ಲಿ ಆದ್ದಂತಹ ಎಂ.ಆರ್. ನ್ನು ಪ್ರಶ್ನೆ ಮಾಡಿಲ್ಲ ಅಂದರೆ ಸಾಕ್ಷಿ ಅವರೇ ಸೃಷ್ಟಿ ಮಾಡಿಕೊಂಡರು ದಾಖಲಾತಿ ಎಂದು ನುಡಿಯುತ್ತಾರೆ.

34. ನಮ್ಮ ತಂದೆ ಹುಲುವಾಡಿಯಲ್ಲಿ ಮನೆ ನಿರ್ಮಾಣ ಮಾಡುವ ಸಂದರ್ಭದಲ್ಲಿ ರಾಜಣ್ಣರವರು ಹಣ ಸಹಾಯ ಮಾಡಿದ್ದರು ಅಂದರೆ ಸರಿಯಲ್ಲ. ಅದೇ ರೀತಿ ಹೆಣ್ಣು ಮಕ್ಕಳ ಮದುವೆ ಸಂದರ್ಭದಲ್ಲೂ ಸದರಿ ರಾಜಣ್ಣರವರು ಹಣದ ಸಹಾಯ ಮಾಡಿದ್ದರು ಅಂದರೆ ಸರಿಯಲ್ಲ.

35. ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ರಾಜಣ್ಣರವರು ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿದ್ದಾರೆ ಅಂದರೆ ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ. ತಾಃ10.01.1976 ರಲ್ಲಿ ಪಂಚಾಯತಿ ಪಾರಿಕಾತ್ ಆಯಿತು, ಅದರಂತೆ ದಾವಾ ಆಸ್ತಿಯು ನಮ್ಮ ತಂದೆಯ ಭಾಗಕ್ಕೆ ಬಂತು ಅಂದರೆ ಸರಿ. ಅದರಂತೆ 10.01.1976 ರಲ್ಲಿ ನಿಮ್ಮ ತಂದೆಯ ಸಹೋದರರಿಗೆ ಯಾವ್ಯಾವ ಆಸ್ತಿಯು ಅವರ

ಭಾಗಕ್ಕೆ ಹೋಯಿತು ಅಂದರೆ ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿ ಅಷ್ಟೇ ತಿಳಿದುಕೊಂಡಿದ್ದೇನೆ.

36. ತಾಃ 10.01.1976 ರ ಪಂಚಾಯತ್ ಪಾರಿಕಾತ್‌ನ್ನು ನಾನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿಲ್ಲ. ಎಷ್ಟು ಓದಿ ತಿಳಿದುಕೊಂಡಿದ್ದೀರಾ ಅಂದರೆ ಓದೇ ಇಲ್ಲ. ಸದರಿ ಪಂಚಾಯತ್ ಪಾರಿಕಾತ್ ಆಗಿದೆ ಎಂದು ಬರೀ ಬಾಯಿ ಮೂಲಕ ಹೇಳುತ್ತಿದ್ದೇನೆ ಅಂದರೆ ಸಾಕ್ಷಿ ನಾನು ಪಂಚಾಯತ್ ಪಾರೀಕತ್‌ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

37. ತಾಃ 10.01.1976 ರಂದು ಒಂದು ವೇಳೆ ಪಂಚಾಯತ್ ಪಾರಿಕಾತ್ ಆಗಿದ್ದಲ್ಲಿ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೀರಿ ಅಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ. 1976 ರಿಂದ 1990 ರವರೆಗೆ ಕಂದಾಯ ದಾಖಲಾತಿಗಳು ಅಂದರೆ ಪಹಣಿಯನ್ನು ನಿಮ್ಮ ತಂದೆಯವರ ಹೆಸರಿನಲ್ಲಿ ಪಡೆದುಕೊಂಡಿದ್ದಾರೆಯೇ ಅಂದರೆ ಗೊತ್ತಿಲ್ಲ. ದಾವಾ ಷಡ್ಯೂಲ್ ಸ್ವತ್ತು ನಿಮ್ಮ ತಂದೆಯ ಹೆಸರಿನಲ್ಲಿರುವ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಅಂದರೆ ಸರಿಯಲ್ಲ.

38. ಈ ಹಂತದಲ್ಲಿ ಒಂದು ದಾಖಲಾತಿ ತೋರಿಸಿ, ತಾಃ10.03.1989 ರಂದು ನಿಮ್ಮ ತಂದೆ ಎಂ.ಎನ್.ರಾಜಣ್ಣ, ಅವರ ಸಹೋದರರು ನಡುವೆ ಪಂಚಾಯತ್ ಪಾರಿಕತ್ ಆಗಿತ್ತು ಅಂದರೆ ಸರಿ. ಸದರಿ ದಾಖಲಾತಿಯನ್ನು ಈಗ ನಿಡಿ.6 ಎಂದು ಗುರುತಿಸಲಾಯಿತು.

39. ತಾಃ 08.12.2000 ರಲ್ಲಿ ನಿಮ್ಮ ತಂದೆ ಎಂ.ಎನ್.ರಾಜಣ್ಣರವರಿಗೆ ಹಕ್ಕು ಖುಲಾಷೆ ಪತ್ರ ಬರೆದುಕೊಟ್ಟಿದ್ದಾರೆ ಅಂದರೆ ಸರಿಯಲ್ಲ ನಮ್ಮ ತಂದೆಯ ಮರಣ ನಂತರ ದಾವಾ ಷಡ್ಯೂಲ್ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಭಾಧ್ಯತೆ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಸ್ತುತ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

40. 2019 ರಲ್ಲಿ ನನ್ನ ತಂದೆ ಮರಣ ಹೊಂದಿದ್ದು ಅಂದರೆ ಸರಿ. ನಿಮ್ಮ ತಂದೆ ಸಾಯುವವರೆಗೂ ಎಂ.ಎನ್.ರಾಜಣ್ಣರವರ ವಿರುದ್ಧ ಆಸ್ತಿಗಳ ವಿಚಾರದಲ್ಲಿ ಯಾವುದೇ ದಾವೆ ಹೂಡಿಲ್ಲ ಅಂದರೆ ಸರಿ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ
ಚನ್ನಪಟ್ಟಣ.